ಮನುಷ್ಯನಲ್ಲಿರುವ ದೊಡ್ಡ ನಿಧಿಯೆಂದರೆ ಮರೆವು. ಆಶ್ಚರ್ಯವಾದರೂ ಇದು ಸತ್ಯ. ಯಾವುದೇ ರೀತಿಯ ನೋವಾಗಲೀ, ನಲಿವಾಗಲೀ ಕಾಲ ಕ್ರಮೇಣ ಮರೆತು ಹೋಗುತ್ತದೆ. 'ಮರೆವು' ಎನ್ನುವುದೊಂದು ಇಲ್ಲವಾಗಿದ್ದಲ್ಲಿ, ಆಗಿ ಹೋದ ಘಟನೆಗಳನ್ನು ಮೆಲುಕು ಹಾಕುವುದರಲ್ಲಿಯೇ ಮಾನವನ ಜೀವನ ಕಳೆದು ಹೋಗುತ್ತಿತ್ತು. ಕೆಲವೊಂದು ಸನ್ನಿವೇಶಗಳು ಬೇಡವೆಂದರೂ ನೆನಪಿನ ಹಲಗೆಯಿಂದ ಅಳಿಸಲು ಆಗುವುದೇ ಇಲ್ಲ. ಇಂತಹ ಸಂದರ್ಭಗಳಲ್ಲಿ ಪ್ರಯತ್ನಪೂರ್ವಕವಾಗಿ ಮರೆವಿನ ನೆರವನ್ನು ಪಡೆಯಬಹುದು.




ದ್ವೇಷ ಸಾಧನೆ ಮಾಡುವುದರಿಂದ ಯಾರೂ ಬಲಶಾಲಿಗಳೆಂದು ನಿರೂಪಿಸಲಾಗುವುದಿಲ್ಲ. ಇದು ಇನ್ನಷ್ಟು ಕಹಿ ವ್ಯಕ್ತಿತ್ವವನ್ನು ಹೊಂದಲು ದಾರಿ ಮಾಡಿಕೊಡುತ್ತದೆ. ಕ್ಷಮಾಗುಣವನ್ನು ಹೊಂದಿರುವ ವ್ಯಕ್ತಿಯು ಯಾವಾಗಲೂ ದೊಡ್ಡವನಾಗುತ್ತಾನೆ. ಕ್ಷಮಿಸುವುದರಿಂದ ಯಾರೂ ನಿರ್ಬಲರಾಗುವುದಿಲ್ಲ. ಬದಲಿಗೆ ಕ್ಷಮಾಗುಣವು ವ್ಯಕ್ತಿಯಲ್ಲಿ ನಿಶ್ಚಿಂತೆಯನ್ನು ಮತ್ತು ನೆಮ್ಮದಿಯನ್ನು ತಂದುಕೊಡುತ್ತದೆ. ಕ್ಷಮೆ ಯಾಚಿಸುವ ವ್ಯಕ್ತಿಗಿಂತ ಕ್ಷಮಿಸುವ ವ್ಯಕ್ತಿ ಅತ್ಯಂತ ವಿಶಾಲ ಮನೋಭಾವ ಉಳ್ಳವನಾಗಿರುತ್ತಾನೆ. 'ಕ್ಷಮಿಸು' ಎಂದು ಕೇಳುವುದು ಕೆಲವೊಮ್ಮೆ ಕಷ್ಟವಾದರೂ, 'ಕ್ಷಮಿಸಿದ್ದೇನೆ' ಎಂದು ಹೇಳಿ ಮನ್ನಿಸುವುದು ಅತೀ ಕ್ಲಿಷ್ಟಕರ.

ಕ್ಷಮೆ ಯಾಚಿಸುವವರು ಅದಕ್ಕೆ ಅರ್ಹರಾಗಲೀ ಬಿಡಲೀ, ನಾವು ಶಾಂತಿಯಿಂದ ಹಾಗೂ ನೆಮ್ಮದಿಯಿಂದ ಜೀವಿಸಲು, ಪ್ರತಿಯೊಬ್ಬರೂ ಕ್ಷಮಿಸುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಕ್ಷಮಿಸುವುದರಿಂದ ವ್ಯಕ್ತಿಯು ಹಿಂದೆ ಮಾಡಿರುವ ತಪ್ಪನ್ನು ಸರಿಪಡಿಸಲು ಸಾಧ್ಯವಿಲ್ಲ. ಆದರೆ ಮುಂದಾಗುವ ತಪ್ಪುಗಳನ್ನು ತಡೆಯುವ ಸಾಧ್ಯತೆಗಳಿವೆ. ಕೆಲವೊಮ್ಮೆ ಸಂಬಂಧಗಳ ಉಳಿವಿಗಾಗಿ ಕ್ಷಮೆಯ ಅವಶ್ಯಕತೆಯಿರುತ್ತದೆ. ಕ್ಷಮಾದಾನದಿಂದ ಕ್ಷಮೆ ಯಾಚಿಸುವ ವ್ಯಕ್ತಿ ಸರಿ ಎಂದಾಗುವುದಿಲ್ಲ. ಆದರೆ ಕ್ಷಮಾದಾನಿಯು ನಿರಾಳವಾಗಿರಲು ಇದು ಸಹಾಯ ಮಾಡುತ್ತದೆ ಹಾಗೂ ಇದು ಆತನನ್ನು ಉನ್ನತ ವ್ಯಕ್ತಿಯನ್ನಾಗಿ ರೂಪಿಸಲು ಸಹಕರಿಸುತ್ತದೆ.

ನಮ್ಮನ್ನು ಇಷ್ಟ ಪಡುವವರ ಬಗ್ಗೆ ಪ್ರೀತಿಯಿಂದ, ಕರುಣೆಯಿಂದ ಹಾಗೂ ಸ್ನೇಹಯುತವಾಗಿ ಇರುವುದು ಬಲು ಸುಲಭ. ಪುಟವಿಟ್ಟ ಚಿನ್ನದಂತೆ ನಮ್ಮ ಗುಣದ ನಿಜವಾದ ಪರೀಕ್ಷೆ ನಡೆಯುವುದು ನಾವು ನಮ್ಮ ಬಗ್ಗೆ ಇಷ್ಟವಿಲ್ಲದವರ ಬಗ್ಗೆಯೂ ಪ್ರೀತಿಯಿಂದ, ಕರುಣೆಯಿಂದ ಹಾಗೂ ಸ್ನೇಹಯುತವಾಗಿ ಇದ್ದಾಗ ಮಾತ್ರ! ಇದು ಸ್ವಲ್ಪ ಕಷ್ಟಕರವಾದರೂ ಅಸಾಧ್ಯವಾದುದಂತೂ ಅಲ್ಲ. ಕ್ರಿಯೆಗೆ ತಕ್ಕ ಪ್ರತಿಕ್ರಿಯೆ ಬರದಿದ್ದಾಗ ಸ್ನೇಹ ಹಸ್ತ ಚಾಚುವುದು ವ್ಯರ್ಥ ಎಂಬ ಭಾವನೆ ಬರುವುದು ಸಹಜ. ಆದರೆ ಸತತ ಪ್ರಯತ್ನದಿಂದ ಎಂಥಹಾ ಕಲ್ಲು ಮನಸ್ಸಿನ ವ್ಯಕ್ತಿಯನ್ನಾಗಲೀ ಮಾತನಾಡಿಸಬಹುದು, ಅವರ ಮನ ಕರಗಿಸಬಹುದು. ಇಲ್ಲಿ 'ನಾನೇ ಏಕೆ' ಎಂಬ ಪ್ರಶ್ನೆ ಉದ್ಭವಿಸಲೇಬಾರದು. 'ಅಹಂ' ಇದ್ದಲ್ಲಿ ಯಾವ ಕೆಲಸವೂ ಸಾಗುವುದಿಲ್ಲ. ಆಗಿರುವ ಘಟನೆಯನ್ನು ಮರೆತು ಪರಿಸ್ಥಿತಿಯನ್ನು ತಿಳಿಗೊಳಿಸುವ ಪ್ರಕ್ರಿಯೆ ಮುಖ್ಯವಾದಾಗ ಮಾತ್ರ ಇದು ಸಾಧ್ಯ. ಕ್ಷಮೆಯ ಅರ್ಥ ಮತ್ತು ಅದರ ಮಹತ್ವವನ್ನು ಅರಿತವರಿಂದ ಮಾತ್ರ ಕ್ಷಮಿಸಲು ಸಾಧ್ಯ. ಪರಿಪಕ್ವತೆ ಇಲ್ಲದವರಿಗೆ ತಿಳಿ ಹೇಳುವ ವ್ಯರ್ಥ ಪ್ರಯತ್ನ ಮಾಡುವುದಕ್ಕಿಂತ, ಪ್ರೌಢತೆ ಹೊಂದಿರುವವರು ಆಗಿರುವ ತಪ್ಪನ್ನು ಮರೆತು, ಮನ್ನಿಸಿ ಮುನ್ನಡೆದರೆ ಬಹಳ ಉತ್ತಮ.

ಕ್ಷಮೆಯಾಚನೆ ಸಹಾ ಎಲ್ಲರಿಂದಲೂ ಸಾಧ್ಯವಿಲ್ಲ. ಕ್ಷಮಾದಾನಿಯು ಹೇಗೆ ವಿಶಾಲ ಮನೋಭಾವದವನು ಆಗಿರುತ್ತಾನೆಯೋ ಹಾಗೆಯೇ ಕ್ಷಮೆಯಾಚಕನೂ ಸಹಾ ಅತ್ಯಂತ ಧೈರ್ಯಶಾಲಿಯಾಗಿರುತ್ತಾನೆ. ಅಧೈರ್ಯವಂತರಿಂದ ಕ್ಷಮೆಯಾಚನೆ ಅಸಾಧ್ಯ. ವ್ಯಕ್ತಿಯೊಬ್ಬ 'ಕ್ಷಮಿಸು' ಎಂದಾಗ, ಆತನನ್ನು ಕ್ಷಮಿಸುವ ವ್ಯಕ್ತಿ ಬಹಳ ಪ್ರಬಲವಾದ ವ್ಯಕ್ತಿಯಾಗಿರುತ್ತಾನೆ. ತಪ್ಪು ಮಾಡಿರುವ ವ್ಯಕ್ತಿ ಕ್ಷಮೆ ಯಾಚಿಸಿದಾಗ, ಆಗಿರುವ ತಪ್ಪನ್ನು ಕಡೆಗಣಿಸಿ ಅವರನ್ನು ಮನ್ನಿಸಲು ಬಹಳ ಸಾಮರ್ಥ್ಯವಿರಬೇಕು. ಇವರಿಬ್ಬರಲ್ಲಿ ಯಾರು ಮೊದಲು ನಡೆದಿರುವ ಘಟನೆಯನ್ನು ಮರೆಯುತ್ತಾರೋ ಅವರು ಅತ್ಯಂತ ಸಂತೋಷದಾಯಕ ವ್ಯಕ್ತಿಯಾಗಿರುತ್ತಾನೆ.

ಪ್ರಪಂಚದಲ್ಲಿ ಯಾರೂ ಪರಿಪೂರ್ಣರಲ್ಲ. ತಮ್ಮ ತಮ್ಮ ಜೀವಿತಾವಧಿಯಲ್ಲಿ ಪ್ರತಿಯೊಬ್ಬರೂ ಕಾರಣಾಂತರಗಳಿಂದ ಯಾವುದಾದರೂ ತಪ್ಪುಗಳನ್ನು ಮಾಡಿರುತ್ತೇವೆ. ತಿಳುವಳಿಕೆ ಉಳ್ಳವರಿಗೆ ಮಾಡಿದ ತಪ್ಪು ಬಹು ಬೇಗ ಗಮನಕ್ಕೆ ಬರುತ್ತದೆ ಹಾಗೂ ಕ್ಷಮೆಯಾಚನೆ ಅದಕ್ಕೆ ಪರಿಹಾರ ಎಂಬ ಅರಿವಿರುತ್ತದೆ. ಇದೇ ಕಾರಣಕ್ಕಾಗಿಯೇ ಬೇರೆಯವರ ತಪ್ಪನ್ನೂ ಮನ್ನಿಸುವುದು ಸೂಕ್ತವಲ್ಲವೇ?

ಕ್ಷಮೆ ಎನ್ನುವುದು ಇಲ್ಲವಾದಲ್ಲಿ, ಬದುಕು ಅಸೂಯೆ ಮತ್ತು ಪ್ರತೀಕಾರದ ಸುಳಿಯ ಆಡಳಿತದಲ್ಲಿ ಸಿಕ್ಕಿ ನಲುಗಿ ಹೋಗುತ್ತದೆ. ಬದುಕಿನ ಶ್ರೇಷ್ಠತೆಯ ದರ್ಜೆ ಯಾವಾಗಲೂ ಸಂಬಂಧಗಳ ಗುಣಮಟ್ಟದ ಮೇಲೆ ಅವಲಂಬಿತವಾಗಿರುತ್ತದೆ. ಸಂಬಂಧಗಳೇ ಇಲ್ಲದ ಮೇಲೆ ಬದುಕು ಉತ್ತಮವಾಗಿರಲು ಹೇಗೆ ಸಾಧ್ಯ? ಬಾಂಧವ್ಯದಲ್ಲಿ ಬಂಧವಿದ್ದರೆ ಮಾತ್ರ ಜೀವನದಲ್ಲಿ ಸುಖ ಸಂತೋಷಗಳು ತುಂಬಿ ತುಳುಕುತ್ತವೆ. ಇದಕ್ಕಾಗಿ ಪ್ರತಿಯೊಬ್ಬರಲ್ಲೂ ಕ್ಷಮಾಗುಣದ ಅವಶ್ಯಕತೆಯಿದೆ. ಒಂದಲ್ಲ ಒಂದು ಕಾರಣದಿಂದ ಸಂಬಂಧಗಳಲ್ಲಿ ಬಿರುಕುಂಟಾದಾಗ, ಆಗಿರುವ ತಪ್ಪಿನ ಬಗ್ಗೆಯೇ ಚಿಂತಿಸುತ್ತಾ ಕೂರಬಾರದು.

ಕ್ಷಮಾಗುಣ ಇಲ್ಲದಿದ್ದರೆ, ಮನಸ್ಸಿನ ಸ್ಥಿರತೆ ಹಾಗೂ ಸಾಮರ್ಥ್ಯವು ಅಸೂಯೆ ಹಾಗೂ ಹೊಟ್ಟೆಕಿಚ್ಚಿನ ವರ್ತುಲದಲ್ಲಿ ಸಿಲುಕಿ ಒದ್ದಾಡತೊಡಗುತ್ತದೆ. ಆಗ ಜೀವನದ ಬಂಡಿಯು 'ಬ್ರೇಕ್' ಹಾಕಿ ಓಡಿಸುವ ವಾಹನದಂತೆ ನಿಂತು ನಿಂತು ಮುಂದೆ ಹೋಗುತ್ತಿರುತ್ತದೆ. ಈ ನಿಧಾನಗತಿಯಿಂದ ಜೀವನದಲ್ಲಿ ನಿರಾಸಕ್ತಿ ಮೂಡಿ ಜುಗುಪ್ಸೆ ಮನೆಮಾಡುತ್ತದೆ. ಇದೆಲ್ಲದರಿಂದ ಹೊರಬರಬೇಕಾದರೆ, ಎದುರಿಗಿರುವ ವ್ಯಕ್ತಿ ಯಾರು, ಏನು, ಏಕೆ ಎಂದು ನೋಡದೆ ಅವರನ್ನು ಕ್ಷಮಿಸಬೇಕು. ಈ ಕ್ಷಮೆ ಅವರು ಸರಿ ಎಂದು ಪ್ರಮಾಣೀಕರಿಸಲು ಅಲ್ಲ. ಕ್ಷಮಾದಾನಿಗೆ ಏರಿಳಿತಗಳಿಲ್ಲದೆ ಜೀವನ ನಡೆಸಲು ಇದು ಸಹಕಾರಿಯಾಗುತ್ತದೆ.

ಕ್ಷಮಾಗುಣವನ್ನು ರೂಢಿಸಿಕೊಂಡರೆ ಜೀವನದ ದೃಷ್ಟಿಕೋನವೇ ಬದಲಾಗುತ್ತದೆ. ಈ ಬದಲಾವಣೆ ನಿಜಕ್ಕೂ ಒಳ್ಳೆಯ ರೀತಿಯದ್ದೇ ಆಗಿರುತ್ತದೆ. ಬೇರೆಯವರನ್ನು ಕ್ಷಮಿಸುವುದರ ಜೊತೆಗೆ ನಮ್ಮನ್ನು ನಾವು ಕ್ಷಮಿಸಿಕೊಳ್ಳುವುದು ಸಹಾ ಬದುಕಿನಲ್ಲಿ ಬಹು ಅವಶ್ಯಕವಾದ ಕ್ರಿಯೆ. ಅನ್ಯರನ್ನು ಕ್ಷಮಿಸಿ, ಆಗಿರುವ ತಪ್ಪನ್ನು ನಮ್ಮ ಮೇಲೆ ಹಾಕಿಕೊಂಡು ಕೊರಗುವುದರಿಂದ ಯಾವುದೇ ಪ್ರಯೋಜನವಿಲ್ಲ. ಇದು ಸ್ವಸಾಮರ್ಥ್ಯವನ್ನು ಕುಗ್ಗಿಸುತ್ತದೆ.

ನಮ್ಮ ಸುಪ್ತ ಮನಸ್ಸಿನಲ್ಲಿರುವ ಅರಿವಿನ ಗೋಚರವಾಗುವುದು ನಾವು ಬದುಕಿನಲ್ಲಿ ಕ್ಷಮಾಗುಣವನ್ನು ಅಳವಡಿಸಿಕೊಂಡಾಗ ಮಾತ್ರ. ಕ್ಷಮಿಸುವ ಗುಣವನ್ನು ಸತತ ಪ್ರಯತ್ನದಿಂದ ಅಭ್ಯಸಿಸಿದಲ್ಲಿ ನಮ್ಮಲ್ಲಿರುವ ಒಳ್ಳೆಯ ಗುಣಗಳಿಗೆ ಶಕ್ತಿ, ಸಾಮರ್ಥ್ಯ ಬರುತ್ತದೆ. ಇದರಿಂದ ಜೀವನ ಲವಲವಿಕೆಯಿಂದ ಕೂಡಿರುತ್ತದೆ. ಒಳ್ಳೆಯದು ಹಾಗೂ ಕೆಟ್ಟದ್ದನ್ನು ಗುರುತಿಸುವ ಕಲೆ ಕರಗತವಾಗುತ್ತದೆ.

ನಾವು ಸಂತೋಷವಾಗಿದ್ದರೆ, ನಮ್ಮ ಸುತ್ತಮುತ್ತಲಿನ ಜನರೂ ಖುಷಿಯಿಂದ, ನೆಮ್ಮದಿಯಿಂದ ಇರುತ್ತಾರೆ. ನಮ್ಮ ಹಾಗೂ ಪರಿಸರದ ಶಾಂತಿ, ನೆಮ್ಮದಿ ಹೆಚ್ಚುತ್ತದೆ. ಪರಸ್ಪರರನ್ನು ಸಂತೋಷದಾಯಕವಾಗಿಡಲು ಸಹಕರಿಸುತ್ತದೆ. ■